ಹರಪನಹಳ್ಳಿ ತಾಲ್ಲೂಕು ಕೇಂದ್ರ ಬಾಲಕಿಯರ ಜೂನಿಯರ್ ಕಾಲೇಜು ಮಂಜೂರು ಮಾಡುವ ಬಗ್ಗೆ

೮೬೩ (ಎ). ಶ್ರೀ ಬಿ. ಹೆಚ್. ಯಂಕಾ ನಾಯಕ್, (ಹರಪನಹಳ್ಳಿ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ಬಾಲಕಿಯರ ಕಿರಿಯ ಕಾಲೇಜನ್ನು ಮಂಜೂರು ಮಾಡಲು ಅತ್ಯವಶ್ಯಕವಾಗಿರುವುದು ಸರ್ಕಾರದ ಗಮನದಲ್ಲಿದೆಯೆ ?

ಆ) ಅಲ್ಲಿನ ಹಳೆಯ ವಿದ್ಯಾ ಸಂಸ್ಥೆಯಾದ ಸರ್ಕಾರಿ ಪ್ರೌಢಶಾಲೆಯನ್ನು ಸರ್ಕಾರಿ ಮಹಾ ವಿದ್ಯಾಲಯ (ಪದವಿಪೂರ್ವ ಕಾಲೇಜು)ವಾಗಿ ಪರಿವರ್ತಿಸಿದ್ದು ಅಲ್ಲಿ ಪೀಠೋಪಕರಣದ ಅಭಾವ ವಿರುವುದು ಸರ್ಕಾರದ ಗಮನದಲ್ಲಿದೆಯೇ ?

ಇ) ನೂರು ವರ್ಷ ತುಂಬಿರುವ ಸದರಿ ಕಾಲೇಜಿಗೆ ಒಳ್ಳೆಯ ಪೀಠೋಪಕರಣ ಹಾಗೂ ಒಂದು ಶತಮಾನೋತ್ಸವ ಕಟ್ಟಡ ನಿರ್ಮಿಸಲು ಮಂಜೂರಾತಿಯನ್ನು ನೀಡಲಾಗುವುದೇ ?

ಶ್ರೀ ಡಿ. ವಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಇದರ ಬಗ್ಗೆ ಯಾವ ಪ್ರಸ್ತಾವನೆಯೂ ಬಂದಿಲ್ಲ.

ಆ) ಇದರ ಬಗ್ಗೆ ವ್ಯಾಚಾರ್ಯರಿಂದ ಯಾವ ಪ್ರಸ್ತಾಪವೆಯೂ ಬಂದಿಲ್ಲ.

ಇ) ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ವಾಯುಯಿಂದೂತ ಸಂಚಾರ ಮಾರ್ಗಗಳ ಬಗ್ಗೆ

೯೫೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಆಥಣಿ).— ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಾಯುಯಿಂದೂತ ಸಂಚಾರ ಮಾರ್ಗಗಳಿವೆಯು ?

ಆ) ವಾಯುಯಿಂದೂತ ಸಂಚಾರವನ್ನು ಹುಬ್ಬಳ್ಳಿ ಮತ್ತು ವಿಜಾಪುರಕ್ಕೆ ವಿಸ್ತರಿಸುವ ಯೋಜನೆ ಇದೆಯೇ ?

ಇ) ಗೋಕಾಕ್, ಜಲಪಾತ, ವಿಜಾಪುರದ ಗೋಳಗುಮ್ಮಟ, ಬಾದಾಮಿ ಗುಹೆಗಳು, ಐಹೊಳೆ ಪಟ್ಟದಕಲ್ಲುಗಳು ವೊದಲಾದ ನೈಸರ್ಗಿಕ ಹಾಗೂ ಐತಿಹಾಸಿಕ—ಚಾರಿತ್ರಿಕ ಸ್ಥಳಗಳನ್ನು ನೋಡುವ ಪ್ರವಾಸಿಗಳಿಗೆ ಈ ಸೌಲಭ್ಯ ಅಗತ್ಯವಲ್ಲವೆ ?

ಈ) ಈ ಬಗ್ಗೆ ಸರ್ಕಾರದವರು ಕೇಂದ್ರದೊಡನೆ ವ್ಯವಹರಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧) ಹೈದರಾಬಾದ್ —— ತಿರುಪತಿ —— ಬೆಂಗಳೂರು

೨) ಮೈಸೂರು —— ಬೆಂಗಳೂರು —— ಬಳ್ಳಾರಿ.

ಆ) ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾದ ನಂತರ ವಾಯುಯಿಂದೂತ ಸಂಚಾರ ವನ್ನು ವಿಸ್ತರಿಸಲು ಸಾಧ್ಯ.

ಇ) ಈ ಸ್ಥಳಗಳಿಗೂ ವಾಯುಯಿಂದೂತ ಸೌಲಭ್ಯ ಅವಶ್ಯಕ. ಆದರೆ ಇಲ್ಲಿ ವಿಮಾನ ನಿಲ್ದಾಣಗಳು ಇಲ್ಲದಿರುವುದರಿಂದ ವಾಯುಯಿಂದೂತ ಸಂಚಾರವನ್ನು ವಿಸ್ತರಿಸಲು ಸಾಧ್ಯವಾಗಲಾರದು.

ಈ) ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತೆ.